ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 110 ಉಖಾಯೋ 2009.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 22.09.2010.

ಗೆ,

ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

**ಮಾನ್ಯರೆ,**

**ವಿಷಯ:-** **2009-10ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ MGNREGA ಕಾಮಗಾರಿಗಳ ಹಾಗೂ ಕೂಲಿಕಾರರ ವಿವರಗಳನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗೋಡೆಬರಹ ಬರೆಸುವ ಬಗ್ಗೆ.**

ಉಲ್ಲೇಖ:- ದಿನಾಂಕ: 16.09.2010ರಂದು ನಡೆದ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ತೀರ್ಮಾನ.

-::::-

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ದಿನಾಂಕ: 16.09.2010ರಂದು ನಡೆದ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮ ಪಂಚಾಯತಿಗಳು ಅನುಷ್ಠಾನಗೊಳಿಸುವ ಕಾಮಗಾರಿಗಳ ಮಾಹಿತಿಯನ್ನು ಗ್ರಾಮ ಪಂಚಾಯತಿ ಕಟ್ಟಡಗಳ ಗೋಡೆಗಳ ಮೇಲೆ/ಬೋರ್ಡ್‌ಗಳ ಮೇಲೆ ನಮೂದಿಸಿರುವುದಿಲ್ಲವೆಂದು ಹಾಗೂ ಪ್ರತಿ ಕಾಮಗಾರಿಗೆ ಸಂಬಂಧಿಸಿದಂತೆ ಕಾಮಗಾರಿಯ ಸ್ಥಳದಲ್ಲಿ ಕಾಮಗಾರಿಯ ವಿವರಗಳನ್ನು ಬೋರ್ಡ್‌ನಲ್ಲಿ ಬರೆಸಿರುವುದಿಲ್ಲವೆಂದು ತೀವ್ರವಾಗಿ ಆಕ್ಷೇಪಿಸಿರುತ್ತಾರೆ. ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಗ್ರಾಮ ಪಂಚಾಯತಿಯು ಅನುಷ್ಠಾನಗೊಳಿಸುವ ಎಲ್ಲಾ ಕಾಮಗಾರಿಗಳ ವಿವರಗಳನ್ನು ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಕಾಮಗಾರಿ ನಡೆಯುವ ಸ್ಥಳದಲ್ಲಿ ಬೋರ್ಡ್ ಹಾಕಿಸಬೇಕಾಗಿರುತ್ತದೆ. ಆದುದರಿಂದ ಎಲ್ಲಾ ಗ್ರಾಮ ಪಂಚಾಯಿತಿಗಳು 2009-10ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿರುವ ಎಲ್ಲಾ ಕಾಮಗಾರಿಗಳ ಮಾಹಿತಿಯ ವಿವರಗಳನ್ನು ಗ್ರಾಮ ಪಂಚಾಯತಿ ಕಚೇರಿಯ ಕಟ್ಟಡಗಳ ಮೇಲೆ, ಬೋರ್ಡ್‌ಗಳ ಮೇಲೆ ಬರೆಸಲು ಹಾಗೂ ಪ್ರತಿ ಕಾಮಗಾರಿಯ ವಿವರಗಳನ್ನು ಪ್ರತಿ ಕಾಮಗಾರಿ ಕೈಗೊಂಡಿರುವ ಸ್ಥಳದಲ್ಲಿ ಬೋರ್ಡ್‌ಗಳ ಮೂಲಕ ನಮೂದಿಸಲು ಈ ಮೂಲಕ ಸೂಚಿಸಲಾಗಿದೆ. ಕಾಮಗಾರಿಗಳ ಸ್ಥಳದಲ್ಲಿ ಬರೆಯಬಹುದಾದ ಬೋರ್ಡ್ ಮಾದರಿಯನ್ನು email ಮೂಲಕ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಈಗಾಗಲೇ ರವಾನಿಸಲಾಗಿದೆ.

ಮುಂದುವರೆದು 2009-10ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿರುವ ಎಲ್ಲಾ MGNREGA ಕಾಮಗಾರಿಗಳಿಗೆ ಸಂಬಂಧಿಸಿದ ಕೂಲಿಕಾರರಿಗೆ ಪಾವತಿಸಿದ ಮೊಬಲಗನ್ನು ಆಯಾ ಗ್ರಾಮಗಳಲ್ಲಿ ಗೋಡೆ ಬರಹದ ಮೂಲಕ ನಮೂದಿಸಲು ಕಟ್ಟುನಿಟ್ಟಿನ ಕ್ರಮ ಜರುಗಿಸಲು ಈ ಮೂಲಕ ಆದೇಶಿಸಲಾಗಿದೆ. ಅಲ್ಲದೇ 2010-11ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರ ಹಾಗೂ ಯೋಜನೆಯಡಿ ಕೆಲಸ ನಿರ್ವಹಿಸಿರುವ ಉದ್ಯೋಗಸ್ಥರ ವಿವರಗಳನ್ನು ಸಹ ಆಯಾ ಗ್ರಾಮ ಪಂಚಾಯತಿಯ ಗ್ರಾಮಗಳ ಪ್ರಮುಖ ಸ್ಥಳಗಳಲ್ಲಿ ಗೋಡೆ ಬರಹದ ಮೂಲಕ ಪ್ರಚಾರಪಡಿಸಲು ತಿಳಿಸಲಾಗಿದೆ.

1796

ತಮ್ಮ ನಂಬುಗೆಯ,

(ವಿ. ರವಿಕುಮಾರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.